ಈ ಹಿಂದಿನ ಸರ್ಕಾರ ಕೆಲವು ಸಾರಿ ಸಹಕಾರಿ ಸಂಘಗಳ ಮಹಾ ಸಭೆಯನ್ನು ಕೊನೆಯ ಘಳಿಗೆಯಲ್ಲಿ ತಡೆಹಿಡಿದುದರ ಪರಿಣಾಮವಾಗಿ ರಾಜ್ಯದಲ್ಲಿರುವ ಸಹಕಾರಿ ಸಂಘಗಳಿಗೆ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ. ಸಹಕಾರಿ ಕಾನೂನಿಗೆ ಇತ್ತೀಚೆಗೆ ಆದ ತಿದ್ದುಪಡಿಯಂತೆ ಮೂರು ವರ್ಷಗಳಿಗೊಮ್ಮೆ ಆಡಳಿತ ಮಂಡಳಿಯ ಚುನಾವಣೆಯು ನಡೆಯಬೇಕಾಗಿದ್ದು ಈ ವರ್ಷವೇ ಹೆಚ್ಚಿನ ಎಲ್ಲಾ ಸಹಕಾರಿ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಯಲಿದೆ.

ಈ ಹಿಂದಿನ ಸರ್ಕಾರ ಮಾಡಿದಂತೆ ಸಹಕಾರಿ ಸಂಘಗಳ ಮಹಾಸಭೆ ಹಾಗೂ ಚುನಾವಣೆಗಳನ್ನು ತಡೆಹಿಡಿಯುವ ಯಾವ ಮುಂದೂಡುವ ಪ್ರಯತ್ನವನ್ನೂ ಈ ಸರ್ಕಾರ ಮಾಡಬಾರದಾಗಿ ಈ ಮೂಲಕ ವಿನಂತಿಸುತ್ತೇನೆ ಈ ರೀತಿ ಮಾಡಿದಲ್ಲಿ ಸಹಕಾರಿ ಸಂಘಗಳಿಗೆ ಲಕ್ಷಾಂತರ ರೂಪಾಯಿಗಳು ನಷ್ಟವಾಗುವುದಲ್ಲದೆ ಈ ಹಿಂದಿನ ಸರ್ಕಾರ ಅನುಸರಿಸಿದ ಧೋರಣೆಯಂತೆ ಈ ಸರ್ಕಾರವೂ ಕೂಡ ನಡೆದಂತಾಗುವುದು. ಇದರಿಂದಾಗಿ ವರ್ಷಕ್ಕೊಮ್ಮೆ ಸಹಕಾರಿ ಸಂಘಗಳ ಎಲ್ಲಾ ಸದಸ್ಯರು ಸೇರಿ ತಮ್ಮ ಸಂಘಗಳ ಬಗ್ಗೆ ಯೋಗ್ಯ ಮಾರ್ಗದರ್ಶನ ಹಾಗೂ ಅಗತ್ಯದ ಮಂಜೂರಾತಿಗಳನ್ನು ನೀಡುವ ಸದಸ್ಯರ ಹಕ್ಕನ್ನೇ ಮೊಟಕುಗೊಳಿಸಿದಂತಾಗುವುದರಿಂದ ಈ ರೀತಿಯ ಧೋರಣೆಯನ್ನು ಈ ಜನಪ್ರಿಯ ಸರ್ಕಾರ ತಳೆಯಬಾರದಾಗಿಯೂ ಸಹಕಾರಿ ಚಳುವಳಿಯು ಸ್ವತಂತ್ರವಾಗಿ ಸುಸೂತ್ರವಾಗಿ ನಡೆಯುವಂತೆ ಸಹಕಾರ ನೀಡಬೇಕಾಗಿಯೂ ಈ ಮೂಲಕ ಮಾನ್ಯ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಖಾತೆ ಸಚಿವರು).— ಈ ಬಗ್ಗೆ ಈಗಾಗಲೇ ನಾವು ಕೆಲವು ಸೂಚನೆಗಳನ್ನು ಕೊಟ್ಟಿದ್ದೇವೆ. ಪ್ರಾಥಮಿಕ ಸಹಕಾರ ಸಂಘಗಳು ಸೆಪ್ಟೆಂಬರ್ ೩೧ ರೊಳಗಾಗಿ ಜನರಲ್ ಬಾಡಿ ಮೀಟಿಂಗ್‌ನ್ನು ಮಾಡಬೇಕು, ತಾಲ್ಲೂಕು ಮಟ್ಟದ ಸಹಕಾರ ಸಂಘಗಳು ಆಕ್ಟೋಬರ್ ೧೬ ರಿಂದ ೩೧ ರೊಳಗಾಗಿ ಜನರಲ್ ಬಾಡಿ ಮೀಟಿಂಗ್ ಮಾಡಬೇಕು, ಜಿಲ್ಲಾಮಟ್ಟದ ಸಹಕಾರ ಸಂಘಗಳು ನವೆಂಬರ್ ೧೫ ರಿಂದ ಡಿಸೆಂಬರ್ ೩೧ ರೊಳಗೆ ಮಾಡಬೇಕು, ರಾಜ್ಯಮಟ್ಟದ ಸಹಕಾರ ಸಂಘಗಳು ಡಿಸೆಂಬರ್ ೧೬ ರಿಂದ ಡಿಸೆಂಬರ್ ೩೧ ರೊಳಗೆ ಕಡ್ಡಾಯವಾಗಿ ಜನರಲ್ ಬಾಡಿ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇನೆ. ಈಗಾಗಲೇ ಯಾರಾದರೂ ತಾರೀಖು ಗೊತ್ತು ಮಾಡಿದ್ದರೆ ಅದನ್ನು ರದ್ದು ಮಾಡಬೇಕೆಂದು ನಾವು ಸೂಚನೆ ಕೊಟ್ಟಿದ್ದೇವೆ.

(೧೫) ರಾಜ್ಯದಲ್ಲಿ ಶಾಲಾ ಕಾಲೇಜುಗಳಿಗೆ ಕರಾರು ಆಧಾರದ ಮೇಲೆ ಶಿಕ್ಷಕರನ್ನು ನೇಮಿಸಿರುವುದು

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯದಾದಂತ್ಯ ಕಳೆದ ಎರಡು ವರ್ಷಗಳಿಂದಲೂ ಪ್ರಾಥಮಿಕ, ಪ್ರೌಢಶಾಲೆ, ಕಿರಿಯ ಕಾಲೇಜು ಮತ್ತು ಸರಕಾರಿ ಪದವೀ ಕಾಲೇಜುಗಳಲ್ಲಿ ಶಿಕ್ಷಕರನ್ನು ಮತ್ತು ಉಪನ್ಯಾಸಕರುಗಳನ್ನು ಕರಾರು ಆಧಾರದ ಮೇಲೆ ನೇಮಕ ಮಾಡಲಾಗಿದೆ. ರಾಜ್ಯಾದ್ಯಂತ ಪ್ರಾಥಮಿಕ ಶಾಲೆಗಳಲ್ಲಿ ೬,೦೦೦ ಅಭ್ಯರ್ಥಿಗಳು ಪ್ರೌಢಶಾಲೆಯಲ್ಲಿ ೪,೦೦೦ ಅಭ್ಯರ್ಥಿಗಳು, ಕಿರಿಯ ಕಾಲೇಜುಗಳಲ್ಲಿ ೧೧೦೦ ಅಭ್ಯರ್ಥಿಗಳು ಮತ್ತು ಪದವೀ ಕಾಲೇಜುಗಳಲ್ಲಿ ೫೦೦ ಅಭ್ಯರ್ಥಿಗಳು ಸೇವೆ ಸಲ್ಲಿಸುತ್ತಿದ್ದಾರೆ. ಪ್ರಾಥಮಿಕ, ಪ್ರೌಢಶಾಲೆ, ಕಿರಿಯ ಕಾಲೇಜುಗಳಲ್ಲಿರುವವರನ್ನು ಸೇವೆಯಲ್ಲಿ ಮುಂದುವರೆಸಲಾಗಿದ್ದು (ಸೇವಾ ಕಡಿತ ಇಲ್ಲದೆ) ಕೇವಲ ಪದವಿ ಕಾಲೇಜಿನ ಉಪನ್ಯಾಸಕರುಗಳ ಸೇವೆಯನ್ನು ವರ್ಷಕ್ಕೊಮ್ಮೆ ಸೇವಾ ಕಡಿತ ಮಾಡಲಾಗುತ್ತಿದೆ. ಆದ್ದರಿಂದ ಈ ಹಿಂದೆ ಆಗಿರುವ ಸೇವಾ ಕಡಿತವನ್ನು ಹಿಂತೆಗೆದುಕೊಳ್ಳುವಂತೆ ಮತ್ತು ಈ ಹಿಂದೆ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂಗೊಳಿಸಿದ ಮಾದರಿಯಲ್ಲಿ ಮೇಲ್ಕಂಡ ಎಲ್ಲಾ ಕಂಟ್ರಾಕ್ಟ್ ಅಭ್ಯರ್ಥಿಗಳನ್ನು ಖಾಯಂ ಗೊಳಿಸುವಂತೆ ಸರಕಾರವನ್ನು ಒತ್ತಾಯಿಸುತ್ತಿದ್ದೇನೆ. ದಿನಾಂಕ ಇಂದು ೨೧-೮-೧೯೮೬ರಂದು ಕರ್ನಾಟಕ ರಾಜ್ಯದ ಎಲ್ಲಾ ಕಂಟ್ರಾಕ್ಟ್ ಶಿಕ್ಷಕರು ಉಪನ್ಯಾಸಕರುಗಳು ವಿಧಾನಸೌಧ ಚಲೋ ಬೃಹತ್ ರ‍್ಯಾಲಿಯನ್ನು ಏರ್ಪಡಿಸಿರುತ್ತಾರೆ. ಸದನದ ಮೂಲಕ ಈ ಬಗ್ಗೆ ಸರಕಾರದ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್ (ವಿದ್ಯಾ ಸಚಿವರು).—ಮಾನ್ಯ ಅಧ್ಯಕ್ಷರೇ ಇದೇ ವಿಷಯದ ಬಗ್ಗೆ ಮಾನ್ಯ ಶಾಸಕರಾದ ಶ್ರೀ ವೆಂಕಟರಾಮಯ್ಯನವರು ಮತ್ತು ಶ್ರೀ ಯಡಿಯೂರಪ್ಪನವರೂ ಪ್ರಸ್ತಾಪಿಸಿದ್ದರು. ನಾಳೆ ಇದರ ಬಗ್ಗೆ ಸುದೀರ್ಘವಾದ ಹೇಳಿಕೆಯನ್ನು ಕೊಡುತ್ತೇನೆ.